



# ಶಿಲೆಯಲ್ಲಿ ಕಲೆಯ ಬಲೆ

ಮಿಲಿಯಗಟ್ಟಳೆ ವರ್ಷಗಳ ಇತಿಹಾಸ ಹೊಂದಿರುವ ಗುಹೆಗಳು ನೋಡಲು ತುಂಬಾ ರಮಣೀಯ. ವೈಜ್ಞಾನಿಕ ಸಂಶೋಧನೆಗಳ ಪ್ರಕಾರ ಈ ಗುಹೆಗಳ ರಚನೆ ಬಹಳ ಸ್ವಾರಸ್ಯಕರವಾಗಿದೆ. ಭೂಮಿಯ ಪದರದ ನಡುವಿರುವ ಸುಣ್ಣದ ಕಲ್ಲಿನ ಸಂಧಿಗಳಿಂದ ನುಸುಳುವ ಕಾರ್ಬೋನಿಕ್ ಆಮ್ಲ ನಿಧಾನವಾಗಿ ಸುಣ್ಣದ ಕಲ್ಲನ್ನು ಕರಗಿಸುತ್ತಾ ಈ ಸಂಧಿಗಳನ್ನು ಅಗಲವಾಗಿಸುತ್ತದೆ.

ಈ ಕಾರ್ಬೋನಿಕ್ ಆಮ್ಲ ಎಲ್ಲಿಂದ ಬರುತ್ತದೆ ಅಥವಾ ಉತ್ಪತ್ತಿಯಾಗುತ್ತದೆ ಎನ್ನುವುದೂ ಕುತೂಹಲಕರ. ವಾತಾವರಣ ಹಾಗೂ ಮಣ್ಣಿನಲ್ಲಿರುವ ಅಂಗಾರಾಮ್ಲ ನೀರಿನೊಂದಿಗೆ ಕರಗಿದಾಗ ಕಾರ್ಬೋನಿಕ್ ಆಮ್ಲ ತಯಾರಾಗುತ್ತದೆ. ಅಂತೆಯೇ ಒಳಗೆ ಜಿನುಗುವ ನೀರಿನ ಹನಿಗಳು ತೊಟ್ಟಿಕ್ಕುತ್ತಾ ಶೇಖರಗೊಳ್ಳುತ್ತವೆ. ಈ ನೀರಿನ ಹನಿಗಳು ಕಾಲಕ್ರಮೇಣದಲ್ಲಿ ಬೆಳೆಯುತ್ತಾ ಗುಹೆಗಳಾಗಿ ಮಾರ್ಪಡುತ್ತವೆ. ನಮ್ಮ ಕೈಯಲ್ಲಿರುವ ಎಣ್ಣೆಯ ಪಸೆ, ಇದರಲ್ಲಿರುವ ಸಣ್ಣರಂಧ್ರಗಳ ಬೆಳವಣಿಗೆಯನ್ನು ಸ್ಥಗಿತಗೊಳಿಸುತ್ತವೆ. ಆದುದರಿಂದ ಇವುಗಳನ್ನು ಕೈಯಿಂದ ಮುಟ್ಟಬಾರದು.

ಈ ಗುಹೆಗಳ ರಚನೆ ಬಹಳ ನಿಧಾನವಾದ ಪ್ರಕ್ರಿಯೆ. ಒಂದು ಅಂದಾಜಿನ ಪ್ರಕಾರ ಒಬ್ಬ ಮನುಷ್ಯ ನುಸುಳಬಹುದಾದ ಗುಹೆಯ ರಚನೆಗೆ ಸುಮಾರು ಒಂದು ಮಿಲಿಯ ವರ್ಷ ತಗಲುತ್ತದೆ. ಈ ಸುಂದರವಾದ ಗುಹೆಯ ಒಳಗಿನ ರಚನೆಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ. ನೆಲದಲ್ಲಿ ಉದ್ಭವವಾದಂತೆ ಕಾಣುವ ಸುಂದರ ಶಿವಲಿಂಗಗಳು, ಅದ್ಭುತ ಗೋಪುರಗಳು, ಕಂಬದಂತೆ, ಗ್ಲಾಸಿನ ಸ್ಟ್ರಾದಂತೆ, ಸೀರೆಯ ನೆರಿಗೆಯಂತೆ ಕಾಣುತ್ತಾ ಮನಸೂರೆಗೊಳ್ಳುತ್ತವೆ. ಇದಕ್ಕೆ ಅನುಗುಣವಾಗಿ ಇವನ್ನು ಇಂಗ್ಲಿಷ್‌ನಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ.

ಗುಹೆಯ ಒಳಗಡೆ ಬಾವಲಿ, ಸಲಮಾಂಡರ್‌ನಂತಹ ನಿರುದ್ರಪವಿ ಜೀವಿಗಳು ವಾಸಿಸುತ್ತವೆ. ಅಲ್ಲದೆ ಹಲವು ಜೀವಿಗಳ ಪಳೆಯುಳಿಕೆಗಳೂ ಕಾಣಸಿಗುತ್ತದೆ. ಈ ಗುಹೆಗಳು ವಿಶ್ವಯುದ್ಧದ ಸಮಯದಲ್ಲಿ ಸೈನಿಕರ ವಾಸಸ್ಥಳವಾಗಿತ್ತು ಎನ್ನುವುದು ನಮ್ಮ ಗೈಡ್ ನೀಡಿದ ಮಾಹಿತಿ. ಟೆಕ್ಸಾಸ್‌ನ ಸ್ಯಾನ್ ಅಂಟೂನಿಯೋ ಎಂಬಲ್ಲಿ ಇಂತಹ ಹಲವು ಗುಹೆಗಳು ಕಾಣಸಿಗುತ್ತದೆ. ಹತ್ತರಿಂದ ಇಪ್ಪತ್ತು ಡಾಲರ್ ಶುಲ್ಕ ಕೊಟ್ಟರೆ ಒಂದರಿಂದ ಒಂದೂವರೆ ಗಂಟೆಗಳ ಕಾಲ ಈ ರಮಣೀಯ ಗುಹೆಗಳನ್ನು ನೋಡಬಹುದು.



■ ವನಿತಾ

ಚಿತ್ರ: ವಿನೋದ್ ಕುಮಾರ್